# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ) ರವರ ಕಛೇರಿ, ಎನ್.ಆರ್.ಚೌಕ, ಬೆಂಗಳೂರು – 560 002.

ಸಂಖ್ಯೆ:ಜೆಡಿಟಿಪಿ/ಎಲ್‌ಪಿ/65/2010–11 ದಿನಾಂಕ: 03–07–2014

## ಪ್ರಾರಂಭಿಕ ಪ್ರಮಾಣಪತ್ರ

ವಿಷಯ: ಆಸ್ತಿ ಸಂಖ್ಯೆ: **312/77/2/1, ನಾಗವಾರ ಗ್ರಾಮ, ಹೆಚ್.ಬಿ.ಆರ್ ಉಪ–ವಿಭಾಗ, ಕಸಬಾ ಹೋಬಳಿ, ಬೆಂಗಳೂರು** ಇಲ್ಲಿ ನಿರ್ಮಿಸಲು ಉದ್ದೇಶಿಸಿರುವ ವಸತಿ ಸಮುಚ್ಚಯ ಇಲ್ಲಿ ನಿರ್ಮಿಸುತ್ತಿರುವ ಬ್ಲಾಕ್ – ಎ, ಬಿ ಮತ್ತು ಸಿ ವಸತಿ ಸಮುಚ್ಚಯ ಮತ್ತು ಕ್ಲಬ್‌ಹೌಸ್ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡುವ ಬಗ್ಗೆ.

ಉಲ್ಲೇಖ: 1) ನಕ್ಷೆ ಮಂಜೂರಾತಿ ಸಂಖ್ಯೆ: ಜೆಡಿಟಿಪಿ/ಎಲ್‌ಪಿ/65/2010–11, ದಿನಾಂಕ: 26–07–2012
2) ತಮ್ಮ ಪತ್ರ ದಿನಾಂಕ: 03–10–2013

* * * * * * *

ಆಸ್ತಿ ಸಂಖ್ಯೆ: 312/77/2/1, ನಾಗವಾರ ಗ್ರಾಮ, ಹೆಚ್.ಬಿ.ಆರ್ ಉಪ–ವಿಭಾಗ, ಕಸಬಾ ಹೋಬಳಿ, ಬೆಂಗಳೂರು ಇಲ್ಲಿ ತಳ + ನೆಲ + ಮೇಲಿನ 10 ಅಂತಸ್ತುಗಳ ಬ್ಲಾಕ್ – ಎ, ಬಿ ಮತ್ತು ಸಿ ವಸತಿ ಸಮುಚ್ಚಯ ಕಟ್ಟಡ ಮತ್ತು ತಳ + ನೆಲ + ಮೇಲಿನ 2 ಅಂತಸ್ತುಗಳ ಕ್ಲಬ್‌ಹೌಸ್ ಕಟ್ಟಡ ನಿರ್ಮಿಸಲು ಉಲ್ಲೇಖ (1) ರಂತೆ ಈ ಕಛೇರಿಯಿಂದ ದಿನಾಂಕ: 26–07–2012 ರಂದು ನಕ್ಷೆ ಮಂಜೂರಾತಿಯನ್ನು ನೀಡಲಾಗಿರುತ್ತದೆ. ಸದರಿ ವಸತಿ ಸಮುಚ್ಚಯ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರ ನೀಡಲು ಉಲ್ಲೇಖ (2) ರಲ್ಲಿ ಕೋರಿರುವುದಕ್ಕೆ ಸಂಬಂಧಿಸಿದಂತೆ ಸದರಿ ಕಟ್ಟಡ ನಿರ್ಮಾಣದ ಸ್ಥಳವನ್ನು ಪರಿಶೀಲಿಸಲಾಗಿ, ಮಂಜೂರಾತಿ ನಕ್ಷೆಯನ್ವಯ ಕಟ್ಟಡ ನಿರ್ಮಾಣ ಪ್ರಾರಂಭಿಸಿದ್ದು, ಆರ್.ಸಿ.ಸಿ. ಸ್ಥಂಭಗಳನ್ನು ನಿರ್ಮಿಸಲಾಗಿರುತ್ತದೆ.

ಅಪರ ನಿರ್ದೇಶಕರು (ನಗರ ಯೋಜನೆ) ರವರು ಪ್ರಾರಂಭಿಕ ಪ್ರಮಾಣಪತ್ರ ನೀಡುವ ಪ್ರಸ್ತಾವನೆಗೆ ದಿನಾಂಕ: 01–07–2014 ರಂದು ಅನುಮೋದನೆ ನೀಡಿರುತ್ತಾರೆ. ಸದರಿ ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣಪತ್ರದ ಬಾಬ್ತು ಶುಲ್ಕ ರೂ. 1,36,000/– ಗಳಿಗೆ ಡಿ.ಡಿಯನ್ನು ಸಲ್ಲಿಸಿ ಈ ಕಛೇರಿಯ ರಶೀದಿ ಸಂಖ್ಯೆ: TP/JDTPNRT/01/2014-15/Jun/0014 ದಿನಾಂಕ: 01–07–2014 ರಂದು ಸಂದಾಯ ಮಾಡಿರುವುದರಿಂದ, ಸದರಿ ವಸತಿ ಸಮುಚ್ಚಯ ಮತ್ತು ಕ್ಲಬ್‌ಹೌಸ್ ಕಟ್ಟಡಕ್ಕೆ ಈ ಕೆಳಕಂಡ ಷರತ್ತುಗಳಿಗೆ ಒಳಪಡಿಸಿ ಪ್ರಾರಂಭಿಕ ಪ್ರಮಾಣಪತ್ರವನ್ನು ನೀಡಲಾಗಿದೆ.

1. ಕಟ್ಟಡದ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು.
2. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ–ಪಕ್ಕದವರಿಗೆ ಯಾವುದೇ ರೀತಿಯ ತೊಂದರೆಯಾಗದಂತೆ, ವಾಹನ ಸಂಚಾರಕ್ಕೆ ಅಡಚಣೆಯಾಗದಂತೆ, ಅಪಘಾತ ಆಗದಂತೆ ಕಟ್ಟಡ ನಿರ್ಮಾಣ ಕೈಗೊಳ್ಳುವುದು ಹಾಗೂ ಕೆಲಸಗಾರರಿಗಾಗಿ ಶೆಡ್ ಮತ್ತು ತಾತ್ಕಾಲಿಕ ಶೌಚಾಲಯಗಳನ್ನು ನಿರ್ಮಿಸತಕ್ಕದ್ದು.
3. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಇಂಜಿನಿಯರಿಂಗ್ ಉಪ–ವಿಭಾಗಕ್ಕೆ ಮಾಹಿತಿಯನ್ನು ನೀಡಿ ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.

3/7

ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ)
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

03/7/14 3/7/14 3/7/14

ಗೆ,

ಮೆ: ಪ್ರಿಶ ಪಾಪರ್ಟೀಸ್ ಇಂಡಿಯಾ ಪ್ರೈ ಲಿ.,
# 312/77/2/1, ನಾಗವಾರ ಗ್ರಾಮ,
ಹೆಚ್.ಬಿ.ಆರ್ ಉಪ–ವಿಭಾಗ, ಕಸಬಾ ಹೋಬಳಿ,
ಬೆಂಗಳೂರು,